ಅನುಬಂಧ - 3

ಭಾರತೀಯ ವೈದ್ಯಪದ್ಧತಿಯಲ್ಲಿನ ವೈದ್ಯರು ಮತ್ತು ಸಿಬ್ಬಂದಿ ವರ್ಗದ ಖಾಲಿ ಹುದ್ದೆಗಳ ವಿವರ

ಕ್ರಮ ಸಂಖ್ಯೆ	ಜಿಲ್ಲೆ	ವೈದ್ಯರು	ದಾದಿಯರು	ಔಷಧ ವಿತರಕ	ಗ್ರೂಪ್'ಡಿ'
1.	ಬೆಂಗಳೂರು ನಗರ	5	2	–	72
2.	ಬೆಂಗಳೂರು ಗ್ರಾಮಾಂತರ	-	-	1	–
3.	ಬೆಳಗಾಂ	-	-	-	2
4.	ಬಳ್ಳಾರಿ	6	4	–	19
5.	ಬೀದರ್	7	–	10	04
6.	ಬಿಜಾಪುರ	1	1	1	03
7.	ಚಿಕ್ಕಮಗಳೂರು	6	–	4	–
8.	ಚಿತ್ರದುರ್ಗ	7	–	4	–
9.	ದಕ್ಷಿಣ ಕನ್ನಡ	-	-	1	–
10.	ಧಾರವಾಡ	1	1	–	–
11.	ಗುಲ್ಬರ್ಗಾ	7	–	12	04
12.	ಹಾಸನ	8	–	–	–
13.	ಕೋಲಾರ	1	–	–	–
14.	ಕೊಡಗು	1	–	–	–
15.	ಮಂಡ್ಯ	1	–	1	–
16.	ಮೈಸೂರು	2	5	–	25
17.	ರಾಯಚೂರು	5	–	12	07
18.	ಶಿವಮೊಗ್ಗ	3	1	–	–
19.	ತುಮಕೂರು	-	1	–	–
20.	ಉತ್ತರ ಕನ್ನಡ	-	-	2	–

ರಾಜ್ಯದಲ್ಲಿ ಆರೋಗ್ಯ ವಿಶ್ವವಿದ್ಯಾನಿಲಯ ಸ್ಥಾಪನೆ

107. ಶ್ರೀ ಗುರುಪಾದಪ್ಪ ನಾಗ್ಮಾರಪಲ್ಲಿ (ಔರಾದ್) :- ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ –

ಅ) ರಾಜ್ಯದಲ್ಲಿ ಆರೋಗ್ಯ ವಿಶ್ವವಿದ್ಯಾನಿಲಯವನ್ನು ಎಂದಿನಿಂದ ಸ್ಥಾಪಿಸಲಾಗುವುದು;

ಆ) ಈ ಸಂಬಂಧವಾಗಿ ನೇಮಿಸಲಾಗಿದ್ದ ಡಾ.ಎಚ್. ನರಸಿಂಹಯ್ಯ ಸಮಿತಿಯು ತನ್ನ ವರದಿಯನ್ನು ಸರ್ಕಾರಕ್ಕೆ ನೀಡಿದೆಯೇ;

ಇ) ಈ ವರದಿಯ ಮುಖ್ಯಾಂಶಗಳೇನು;

ಈ) ಈ ವರದಿಯ ಮೇಲೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಶ್ರೀ ಜಿ. ಪುಟ್ಟಸ್ವಾಮಿಗೌಡ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) –

ಅ) ಸರ್ಕಾರದ ಪರಿಶೀಲನೆಯಲ್ಲಿದೆ

ಆ) ಹೌದು

ಇ) ವರದಿಯ ಮುಖ್ಯಾಂಶಗಳೆಂದರೆ :

1. ಕರ್ನಾಟಕದಲ್ಲಿ ಆರೋಗ್ಯ ವಿಶ್ವವಿದ್ಯಾನಿಲಯ ಸ್ಥಾಪಿಸಲು ಶಿಫಾರಸ್ಸು ಮಾಡಿರುವುದು ಪ್ರಥಮವಾಗಿ ಆರೋಗ್ಯ ವಿಜ್ಞಾನಗಳ ಎಲ್ಲಾ ಸಂಶೋಧನಾ ಮತ್ತು ಬೋಧನಾ ವಿಭಾಗಗಳ ಮಟ್ಟವನ್ನು ಹೆಚ್ಚಿಸುವುದು (ದೇಶಿಯ ವೈದ್ಯಪದ್ಧತಿ ಮತ್ತು ಆಧುನಿಕ ವೈದ್ಯ ಪದ್ಧತಿ ಸೇರಿದಂತೆ) ಸದರಿ ವಿಶ್ವವಿದ್ಯಾನಿಲಯ 1992-93ನೇ ಶೈಕ್ಷಣಿಕ ಸಾಲಿನಲ್ಲಿ ಕಾರ್ಯಾಚರಣೆಗೊಳ್ಳುವಂತೆ ಸರ್ವ ಪ್ರಯತ್ನಗಳನ್ನು ಮಾಡುವುದು.
2. ಹೊಸ ವಿಶ್ವವಿದ್ಯಾನಿಲಯವನ್ನು ಪ್ರಾರಂಭದಲ್ಲಿ ಸಂಯೋಜಿತ ವಿಶ್ವವಿದ್ಯಾನಿಲಯ ವೆಂದು ಪ್ರಾರಂಭಿಸುವುದು. ಹಂತ ಹಂತವಾಗಿ ಸ್ವಂತ ಕ್ಯಾಂಪಸ್‌ನ್ನು ವಿಶೇಷ ರಂಗ: ವಿಭಾಗಗಳಲ್ಲಿ ಮುಂದುವರೆದ ತರಬೇತಿ ಮತ್ತು ಸಂಶೋಧನೆಯನ್ನು ಕೈಗೊಳ್ಳಲು ಸ್ವಂತ ಕ್ಯಾಂಪಸ್‌ನ್ನು ಹೊಂದುವುದು. ಪ್ರಸ್ತುತ ಅಸ್ತಿತ್ವದಲ್ಲಿರುವ ಒಂದು ವೈದ್ಯಕೀಯ ಕಾಲೇಜನ್ನು ಸ್ವಾಧೀನಕ್ಕೆ ತೆಗೆದುಕೊಂಡು ಮಾದರಿಯಾಗಿ ಇತರರಿಗೆ, ರೂಪಿಸಲು ಅಭಿವೃದ್ಧಿಪಡಿಸುವುದು.
3. ಹೊಸ ವಿಶ್ವವಿದ್ಯಾನಿಲಯವು ಆಧುನಿಕ ವೈದ್ಯಶಾಸ್ತ್ರದ ಕಾಲೇಜಗಳಿಗೆ ಮತ್ತು ಇತರ ಸಂಸ್ಥೆಗಳಿಗೆ ಪ್ರವೇಶ ಮಟ್ಟವನ್ನು ನಿಗಧಿಗೊಳಿಸಲು ಪೂರ್ಣ ಅಧಿಕಾರವನ್ನು ಹೊಂದಿರತಕ್ಕದ್ದು.
4. ಪ್ರಸ್ತುತ ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯ ಪ್ರಸ್ತುತ ಸ್ಥಿತಿಯಲ್ಲೇ ಕಾರ್ಯ ನಿರ್ವಹಿಸುವುದು. ಹೊಸ ವಿಶ್ವವಿದ್ಯಾನಿಲಯ ಮತ್ತು ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯದಲ್ಲಿ ನಿಯಮಗಳಿಗೆ ಸಂಬಂಧಿಸಿದಂತೆ ಅಂತರ: ವ್ಯತ್ಯಾಸವಿರುವುದಿಲ್ಲ. ನಿರ್ದೇಶನಾಲಯವು ಹೊಸ ವಿಶ್ವವಿದ್ಯಾನಿಲಯ ರೂಪಿಸುವ ನಿಯಮಗಳನ್ನು ಕಾರ್ಯ ಗತಗೊಳಿಸಲು ಅತ್ಯಂತ ಪ್ರಮುಖ ಪಾತ್ರ ವಹಿಸುವುದು. ಈ ಸಂಬಂಧ, ನಿರ್ದೇಶನಾಲಯದ ನಿಯಂತ್ರಣದಲ್ಲಿ ವೈದ್ಯಕೀಯ ಸಂಸ್ಥೆಗಳಿಗೆ ನಿಧಿಪಡಿಸಿರುವ ರೂಪುರೇಷೆಗಳನ್ನು ಕಾರ್ಯಗತ ಗೊಳಿಸುವುಲ್ಲಿ ಪ್ರಮುಖ ಪಾತ್ರ ವಹಿಸುವುದು.
5. ಹೊಸ ವಿಶ್ವವಿದ್ಯಾನಿಲಯ ಹಲವಾರು ಬೋಧಕ ಆಸ್ಪತ್ರೆಗಳ ಆಡಳಿತ, ನಿರ್ವಹಣೆ ಜವಾಬ್ದಾರಿ ಹೊರೆಯಾಗಬಾರದು.
6. ಆರೋಗ್ಯ ಸೇವೆಗಳ ವಿಶ್ವವಿದ್ಯಾನಿಲಯದ ಮಸೂದೆ 1973 (ವಿಧಾನಸಭೆ ಮಸೂದೆ ಸಂಖ್ಯೆ : 48, 1973) ನ್ನು ವಿಧಾನಮಂಡಲದ ಉಭಯ ಸದನಗಳಲ್ಲೂ ಅನು ಮೋದನೆ ಪಡೆಯುವುದು. (ಕೆಲವು-ಸಲಹೆಗಳನ್ನು ಪರಿಷ್ಕರಿಸುವಂತೆ)
7. ಹೊಸ ವಿಶ್ವವಿದ್ಯಾನಿಲಯಕ್ಕೆ ಬೇಕಾದ ಮೂಲ ಸೌಕರ್ಯಗಳನ್ನು ರಾಜ್ಯ ಸರ್ಕಾರದ ಜೊತೆ ಸಮಾಲೋಚಿಸಿ ಸಂಘಟನೆ ಕಾರ್ಯಕ್ಕೆ ಕೂಡಲೇ ಒಬ್ಬ ಆಡಳಿತ ವೃತ್ತಿನುಭವಿ ಹಾಗೂ ಸಹಜ ಸಾಮರ್ಥ್ಯವುಳ್ಳ ವಿಶೇಷಾಧಿಕಾರಿಯನ್ನು ನೇಮಿಸುವುದು.

) ಪರಿಶೀಲನೆಯಲ್ಲಿದೆ

ಬೀದರ್ ಜಿಲ್ಲೆಯಲ್ಲಿ ಪರಿಶಿಷ್ಟ ಜಾತಿ : ಪರಿಶಿಷ್ಟ ಪಂಗಡ ಹಾಗೂ ಹಿಂದುಳಿದ ಜಾತಿಗಳ ವಿದ್ಯಾರ್ಥಿನಿಲಯಗಳ ಸಂಖ್ಯೆ.

1070. ಶ್ರೀ ಗುರುಪಾದಪ್ಪ ನಾಗ್ಮಾರಪಲ್ಲಿ (ಜಿರಾದ್) ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ-

ಅ) ಬೀದರ್ ಜಿಲ್ಲೆಯಲ್ಲಿರುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಹಾಗೂ ಹಿಂದುಳಿದ ಜಾತಿಗಳ ವಿದ್ಯಾರ್ಥಿನಿಲಯಗಳ ಸಂಖ್ಯೆ ಎಷ್ಟು (ತಾಲ್ಲೂಕುವಾರು ಅಂಕಿಅಂಶಗಳನ್ನು ನೀಡುವುದು) ;

ಆ) ಈ ವಿದ್ಯಾರ್ಥಿನಿಲಯಗಳಿಗೆ ಕಳೆದ ಮೂರು ವರ್ಷಗಳಿಂದ ಸರ್ಕಾರದಿಂದ ಬಿಡುಗಡೆ ಮಾಡಿರುವ ಹಣವೆಷ್ಟು (ತಾಲ್ಲೂಕುವಾರು ಅಂಕಿ ಅಂಶಗಳನ್ನು ಕೊಡುವುದು) ;

ಇ) ಜಿಲ್ಲೆಯಲ್ಲಿ ಈ ಮೇಲ್ಕಂಡ ವರ್ಷಗಳಲ್ಲಿ ವಿದ್ಯಾರ್ಥಿಗಳಿಗಾಗಿ ಹೊಸದಾಗಿ ವಿದ್ಯಾರ್ಥಿನಿಲಯಗಳನ್ನು ಪ್ರಾರಂಭಿಸುವ ವಿಚಾರ ಸರ್ಕಾರದ ಪರಿಶೀಲನೆಯಲ್ಲಿದೆಯೇ;